Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 28-12-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ರ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

## ವಿನೋದ್ ಕರ್ತವ್ಯ ತಂಡದಿಂದ ‘ಮೊಳೆ ಮುಕ್ತ ಮರಗಳು’ ಅಭಿಯಾನ

# 280 ಮರಗಳಿಗೆ 3 ಸಾವಿರ ಮೊಳೆ!

ಪ್ರಜಾವಾಣಿ ವಾರ್ತೆ



ಅಭಿಯಾನದಲ್ಲಿ ಪಾಲ್ಗೊಂಡಿದ್ದ ನಟ ಕಿಶೋರ್ ಮತ್ತು ಸೈಬರ್ ಇನ್‌ಸ್ಪೆಕ್ಟರ್ ಎಲ್‌.ವೈ. ರಾಜೇಶ್.

**ಬೆಂಗಳೂರು:** ನಗರದಲ್ಲಿ ಎಸ್. ವಿನೋದ್ (ವಿನೋದ್ ಕರ್ತವ್ಯ) ಅವರ ನೇತೃತ್ವದಲ್ಲಿ ಭಾನುವಾರ ಹತ್ತಾರು ಯುವಕರು ‘ಮೊಳೆ ಮುಕ್ತ ಮರಗಳು’ ಅಭಿಯಾನದ ಅಡಿ ಮರಗಳಿಂದ ಮೊಳೆಗಳನ್ನು ತೆಗೆದು ಹಾಕಿದರು. ಈ ತಂಡ ಕಳೆದ ನ.15ರಿಂದ ಈ ಅಭಿಯಾನ ನಡೆಸುತ್ತಿದೆ.

‘ಮರಗಳಿಗೂ ಜೀವ ಇದೆ ಎಂದು ಹೇಳುತ್ತೇವೆ. ಆದರೆ, ಅವುಗಳನ್ನು ಜೀವಿಗಳಂತೆ ಕಾಣುವುದಿಲ್ಲ. ಮರಗಳಿಗೆ ಮೊಳೆಗಳನ್ನು, ಪಿನ್‌ಗಳನ್ನು ಚುಚ್ಚುವುದರಿಂದ ಅನೇಕ ತೊಂದರೆಗಳು ಉಂಟಾಗುತ್ತವೆ. ಈ ನಿಟ್ಟಿನಲ್ಲಿ, ಸಮಾನ ಮನಸ್ಕರು ಸೇರಿ ಪ್ರತಿ ಶನಿವಾರ, ಭಾನುವಾರ ಈ ಅಭಿಯಾನ ಹಮ್ಮಿಕೊಳ್ಳುತ್ತಿದ್ದೇವೆ. ಈ ಬಾರಿ ವಸಂತ ನಗರ ಮತ್ತು ಸಂಪಂಗಿರಾಮನಗರದಲ್ಲಿ ಅಭಿಯಾನ ನಡೆಸಲಾಯಿತು’ ಎಂದು ವಿನೋದ್ ಕರ್ತವ್ಯ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೇವಲ ಒಂದೂವರೆ ತಿಂಗಳಿನಲ್ಲಿ 280 ಮರಗಳಿಂದ ಮೂರು ಸಾವಿರ ಮೊಳೆಗಳನ್ನು ತೆಗೆದಿದ್ದೇವೆ. ಮರಗಳಿಗೆ ಚುಚ್ಚಿದ್ದ ಸ್ಟ್ಯಾಪಲ್ ಪಿನ್‌ಗಳಿಗಂತೂ ಲೆಕ್ಕವೇ ಇಲ್ಲ’ ಎಂದು ತಿಳಿಸಿದರು.

‘ಮೊಳೆ ಹೊಡೆಯುವುದಲ್ಲದೆ, ಮರಕ್ಕೆ ತಂತಿಯನ್ನು ಸುತ್ತಿರುತ್ತಾರೆ. ಮರ ಬೆಳೆದಂತೆ ತಂತಿಯು ಬಿಗಿಯಾಗುತ್ತದೆ. ಇದರಿಂದ ಮರದ ಬೆಳವಣಿಗೆ ಸರಿಯಾಗುವುದಿಲ್ಲ. ಬೇರಿನಿಂದ ನೀರು ಮತ್ತಿತರ ಅಂಶಗಳು ರೆಂಬೆಗಳಿಗೆ ಪೂರೈಕೆಯಾಗುವುದಿಲ್ಲ. ಆಗ ರೆಂಬೆಗಳು, ಮರಗಳು ಮುರಿದು ಬೀಳುತ್ತಿವೆ. 100 ವರ್ಷ ಆಯಸ್ಸು ಹೊಂದಿರುವ ಮರಗಳು 70 ವರ್ಷಕ್ಕೇ ಮುರಿದು ಬೀಳುತ್ತಿವೆ. ಅಲ್ಲದೆ, ನಗರದಲ್ಲಿ ಮರಗಳು ಬಿದ್ದು ವರ್ಷಕ್ಕೆ 30ರಿಂದ 40 ಜನ ಸಾವಿಗೀಡಾಗುತ್ತಿದ್ದಾರೆ’ ಎಂದು ಅವರು ಹೇಳಿದರು.

**ದಂಡ ಬೀಳುತ್ತದೆ:** ‘ಮರಗಳಿಗೆ ಮೊಳೆ ಹೊಡೆದರೆ ದಂಡ ವಿಧಿಸುವ ಅವಕಾಶವೂ ಕಾನೂನಿನಲ್ಲಿದೆ. ಹೀಗೆ ಮೊಳೆ ಹೊಡೆಯುತ್ತಿದ್ದವರು ನೇರವಾಗಿ ಸಿಕ್ಕಿಬಿದ್ದಾಗ ಅವರಿಗೆ ಕಳೆದ ವಾರ ಬಿಬಿಎಂಪಿ ₹2,500 ದಂಡ ಹಾಕಿದೆ. ಇದನ್ನು ತನ್ನ ಫೇಸ್‌ಬುಕ್ ಖಾತೆಯಲ್ಲಿಯೂ ಬಿಬಿಎಂಪಿ ಹಾಕಿಕೊಂಡಿದೆ’ ಎಂದು ವಿನೋದ್ ಹೇಳಿದರು.

ಈವರೆಗೆ ಈ ಅಭಿಯಾನದಲ್ಲಿ ಹಿರಿಯ ಪೊಲೀಸ್ ಅಧಿಕಾರಿ ಭಾಸ್ಕರ್ ರಾವ್, ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್, ನಟ ಕಿಶೋರ್, ಅಣ್ಣಾಮಲೈ ಸೇರಿದಂತೆ ಹಲವು ಗಣ್ಯರು, ಖ್ಯಾತನಾಮರು ಪಾಲ್ಗೊಂಡಿದ್ದಾರೆ.

‘ಮೊಳೆ ಹಾಕಿದವರ ವಿರುದ್ಧ ದೂರು ನೀಡಲು ಮತ್ತು ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡುವಂತೆ ನಾವು ಭಾಸ್ಕರ್ ರಾವ್ ಅವರಿಗೆ ಮನವಿ ಮಾಡಿದ್ದೆವು. ಅವರು ಈಗಿನ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಪತ್ರ ಬರೆದಿದ್ದಾರೆ. ಶೀಘ್ರದಲ್ಲಿಯೇ ಎಲ್ಲ ಪೊಲೀಸ್ ಠಾಣೆಗಳಿಗೆ ಈ ಸೂಚನೆ ತಲುಪಲಿದೆ. ಇದರಿಂದ ನಾವು ದೂರು ನೀಡಲು ಸಹಾಯವಾಗುತ್ತದೆ. ದೂರು ದಾಖಲಾದರೆ ದಂಡ ವಿಧಿಸಲು ಬಿಬಿಎಂಪಿಗೂ ಅನುಕೂಲವಾಗಲಿದೆ’ ಎಂದು ಅವರು ಹೇಳಿದರು.

ಡಿಆರ್‌ಡಿಒದಲ್ಲಿ ತಾಂತ್ರಿಕ ಅಧಿಕಾರಿಯಾಗಿರುವ ವಿನೋದ್ ಕರ್ತವ್ಯ, ಬೆಂಗಳೂರು ಹುಡುಗರು ಹೆಸರಿನಲ್ಲಿ ತಂಡ ರಚಿಸಿಕೊಂಡಿದ್ದು, ಈವರೆಗೆ 12 ವಾರ್ಡ್‌ಗಳಲ್ಲಿ ಈ ಅಭಿಯಾನ ನಡೆಸಿದ್ದಾರೆ. ಶನಿವಾರ ವಸಂತನಗರದ ಸಿಟಿಜನ್ ಫಾರ್ ಸಿಟಿಜನ್ ತಂಡದ ಹತ್ತು ಯುವಕರು ಈ ತಂಡದೊಂದಿಗೆ ಕೈ ಜೋಡಿಸಿ, ಅಭಿಯಾನದಲ್ಲಿ ಪಾಲ್ಗೊಂಡರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

## ಬ್ರಿಟನ್‌ನಿಂದ ಬಂದವರ ಪೈಕಿ ಮೂವರಿಗೆ ಸೋಂಕು ದೃಢ

# ವಾರವಾದರೂ ಪತ್ತೆಯಾಗಿಲ್ಲ 540 ಮಂದಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬ್ರಿಟನ್‌ನಿಂದ ರಾಜ್ಯಕ್ಕೆ ಬಂದವರ ಪೈಕಿ, ಮತ್ತೆ ಮೂವರಿಗೆ ಕೊರೊನಾ ಸೋಂಕು ತಗುಲಿರುವುದು ಭಾನುವಾರ ದೃಢಪಟ್ಟಿದೆ. ಇದರೊಂದಿಗೆ ಇಂಗ್ಲೆಂಡ್‌ನಿಂದ ಬಂದ 26 ಮಂದಿಯಲ್ಲಿ ಸೋಂಕು ದೃಢಪಟ್ಟಂತಾಗಿದೆ. ಆದರೆ, ವಾರವಾದರೂ 540 ಪ್ರಯಾಣಿಕರು ಪತ್ತೆಯಾಗಿಲ್ಲ.

ಡಿ.27 ರಂದು 153 ಮಂದಿ ಪ್ರಯಾಣಿಕರ ಪರೀಕ್ಷೆ ನಡೆದಿದ್ದು, 87 ಮಂದಿ ವರದಿ ನೆಗೆಟಿವ್ ಬಂದಿದೆ. ಮೂರು ಮಾತ್ರ ಪಾಸಿಟಿವ್ ವರದಿಯಾಗಿದ್ದು, 63 ಪ್ರಯಾಣಿಕರ ವರದಿ ಇನ್ನು ಬರಬೇಕಿದೆ. ಸೋಂಕು ದೃಢಪಟ್ಟವರನ್ನು ಜಿಲ್ಲಾಸ್ಪತ್ರೆಯಲ್ಲಿ ಐಸೋಲೇಷನ್ ವಾರ್ಡ್‌ನಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಅವರಿಗೆ ತಗುಲಿರುವುದು ಬ್ರಿಟನ್ ರೂಪಾಂತರ ಸೋಂಕು ಹೌದೋ ಅಲ್ಲವೋ ಎಂಬುದನ್ನು ಪತ್ತೆ ಮಾಡಲು ನಿಮ್ಹಾನ್ಸ್‌ಗೆ ಗಂಟಲು ದ್ರವ ಮಾದರಿ ಕಳುಹಿಸಿಕೊಡಲಾಗಿದೆ. ಸೋಮವಾರ ಪರೀಕ್ಷೆಯ ಫಲಿತಾಂಶ ಬರಲಿದೆ. ಇದರೊಂದಿಗೆ ರೂಪಾಂತರ ಸೋಂಕು ರಾಜ್ಯಕ್ಕೂ ಕಾಲಿಟ್ಟಿದೆಯೋ, ಇಲ್ಲವೋ ಎಂಬುದು ಸ್ಪಷ್ಟವಾಗಲಿದೆ.

ಬ್ರಿಟನ್ ರೂಪಾಂತರ ಸೋಂಕು ತಡೆಗಟ್ಟುವ ನಿಟ್ಟಿನಲ್ಲಿ ಡಿಸೆಂಬರ್ 1ರಿಂದೀಚೆಗೆ ಇಂಗ್ಲೆಂಡ್‌ನಿಂದ ರಾಜ್ಯಕ್ಕೆ ಬಂದ 2,127 ಪ್ರಯಾಣಿಕರ ಸೋಂಕು ಪರೀಕ್ಷೆಗೆ ಡಿ.21 ರಂದು ರಾಜ್ಯ ಸರ್ಕಾರ ಸೂಚಿಸಿತ್ತು. ಈವರೆಗೂ 1,587 ಮಂದಿಯನ್ನು ಪರೀಕ್ಷೆಗೊಳಪಡಿಸಲಾಗಿದೆ. ಬಾಕಿ 540 ಪ್ರಯಾಣಿಕರು ಪತ್ತೆಯಾಗಿಲ್ಲ. ಪತ್ತೆ ಕಾರ್ಯ ಆರಂಭವಾಗಿ ಒಂದು ವಾರವಾದರೂ ಎಲ್ಲ ಪ್ರಯಾಣಿಕರು ಪತ್ತೆಯಾಗಿಲ್ಲ.

ಪರೀಕ್ಷೆಗೆ ಒಳಪಟ್ಟವರ ಪೈಕಿ, 1,264 ಮಂದಿ ವರದಿ ನೆಗೆಟಿವ್ ಬಂದಿದ್ದು, 26 ಪಾಸಿಟಿವ್ ಬಂದಿವೆ. ಈ ಪೈಕಿ 15 ಬೆಂಗಳೂರಿನಲ್ಲಿ ಪತ್ತೆಯಾಗಿವೆ. ಬಾಕಿ 297 ಮಂದಿ ವರದಿ ಬರಬೇಕಿದೆ.

**911 ಮಂದಿಗೆ ಕೋವಿಡ್:** ರಾಜ್ಯದಲ್ಲಿ ಹೊಸದಾಗಿ 911 ಮಂದಿಗೆ ಕೋವಿಡ್ ದೃಢಪಟ್ಟಿದೆ. ಇದರೊಂದಿಗೆ ಒಟ್ಟಾರೆ ಪ್ರಕರಣಗಳ ಸಂಖ್ಯೆ 9.16 ಲಕ್ಷಕ್ಕೆ ಏರಿದೆ. 1,214 ಮಂದಿ ಗುಣಮುಖರಾಗುವುದರೊಂದಿಗೆ ಗುಣಮುಖರ ಸಂಖ್ಯೆ 8.91 ಲಕ್ಷಕ್ಕೆ ಹೆಚ್ಚಾಗಿದೆ. ಭಾನುವಾರ 11 ಜನ ಮೃತಪಟ್ಟಿದ್ದರೆ, 209 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕನ್ನಡಪ್ರಭ

# ಹಸಿ ಕಸಕ್ಕಾಗಿ ತಿಕ್ಕಾಟ

## ಪಾಲಿಕೆ ಸಿಬ್ಬಂದಿ, ಹಂದಿ ಮಾಲಿಕರ ಪೈಪೋಟಿ

**ಬೆಂಗಳೂರು:** ನಗರದಲ್ಲಿ ಉತ್ಪಾದನೆಯಾಗುವ ಹಸಿ ತ್ಯಾಜ್ಯಕ್ಕೆ ಭಾರೀ ಬೇಡಿಕೆ ಉಂಟಾಗಿದ್ದು, ಹಸಿ ತ್ಯಾಜ್ಯಕ್ಕಾಗಿ ಬಿಬಿಎಂಪಿ ತ್ಯಾಜ್ಯ ಸಂಗ್ರಹಕರು ಮತ್ತು ಹಂದಿ ಸಾಕಾಣಿಕೆದಾರರು ಪೈಪೋಟಿ ಜೋರಾಗಿದೆ!

ಹೌದು, ಬಿಬಿಎಂಪಿಯು ವಿವಿಧ ವಾರ್ಡ್‌ಗಳಲ್ಲಿ ಪ್ರತ್ಯೇಕ ಹಸಿ ತ್ಯಾಜ್ಯ ಸಂಗ್ರಹಿಸುವ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಈ ವಾರ್ಡ್‌ಗಳಲ್ಲಿ ತ್ಯಾಜ್ಯ ವಿಂಗಡಣೆ ಪ್ರಮಾಣ ಹೆಚ್ಚಾಗಿದೆ ಎಂದು ತೋರಿಸುವ ಉದ್ದೇಶದಿಂದ ಅಧಿಕಾರಿಗಳಿಗೆಹಾಗೂಗುತ್ತಿಗೆದಾರರಿಗೆ ಹಸಿ ತ್ಯಾಜ್ಯ ಸಂಗ್ರಹಕ್ಕೆ ಗುರಿ ನೀಡಲಾಗಿದೆ. ಇದರಿಂದ ಇಷ್ಟು ದಿನ ಹಂದಿ ಸಾಕಾಣಿಕೆದಾರರು ತೆಗೆದುಕೊಂಡು ಹೋಗುತ್ತಿದ್ದ ಹಸಿ ತ್ಯಾಜ್ಯಕ್ಕೆ ನಿರ್ಬಂಧ ವಿಧಿಸಲಾಗುತ್ತಿದೆ. ಹಂದಿ ಸಾಕಾಣಿಕೆದಾರು ತೆಗೆದುಕೊಂಡು ಹೋಗುತ್ತಿದ್ದ ಹಸಿ ತ್ಯಾಜ್ಯವನ್ನು ಬಿಬಿಎಂಪಿ ತ್ಯಾಜ್ಯ ಸಂಗ್ರಹಕರು ವಶಕ್ಕೆ ಪಡೆಯುತ್ತಿದ್ದಾರೆ. ಇದರಿಂದ ಹಂದಿ ಸಾಕಾಣಿಕೆದಾರರು ಆಹಾರ ಪೂರೈಕೆ ಕಷ್ಟವಾಗಿದೆ.

ಅಷ್ಟೇ ಅಲ್ಲ ಪಾಲಿಕೆ ವ್ಯಾಪ್ತಿಯಲ್ಲಿ ಹಸಿಕಸ ಪ್ರಮಾಣ ಹೆಚ್ಚಳ ಹಾಗೂ ಹಸಿ ಕಸ ತೂಕ ಹೆಚ್ಚಿಸಿಕೊಳ್ಳಲು ಪಾಲಿಕೆಯ ಘನತ್ಯಾಜ್ಯ ವಿಭಾಗದ ಅಧಿಕಾರಿಗಳು ಸಗಟು ತ್ಯಾಜ್ಯ ಉತ್ಪಾದಕರಿಂದಲೂ ಹಸಿ ಕಸವನ್ನು ಕಾಂಪ್ಯಾಕ್ಟರ್‌ಗೆ ತುಂಬಿಸಿಕೊಳ್ಳುತ್ತಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಪ್ರತಿ ವಾರ್ಡ್‌ನಿಂದ 10ಟನ್ ಕಸ ಸಂಗ್ರಹ ಮಾಡುವ ಕಾಂಪ್ಯಾಕ್ಟರ್‌ನಲ್ಲಿ ಕನಿಷ್ಠ 6ರಿಂದ 8ಟನ್ ಹಸಿಕಸ ಸಂಗ್ರಹ ಮಾಡುವಂತೆ ಗುರಿ ನೀಡಲಾಗಿದೆ. ಮತ್ತೊಂದೆಡೆ ಹಸಿಕಸ ವಿಂಗಡಣೆ ಪ್ರಮಾಣ ಕಡಿಮೆ ಮಾಡುವ ಆರೋಗ್ಯ ಮತ್ತು ಘನತ್ಯಾಜ್ಯ ವಿಭಾಗದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಎಚ್ಚರಿಕೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

**ಗುರಿ ನೀಡಿಲ್ಲ:** ಮನೆ- ಮನೆಯಿಂದ ಹೆಚ್ಚು ಹಸಿ ಕಸ ಸಂಗ್ರಹ ಮಾಡುವುದಕ್ಕೆ ಸೂಚಿಸಲಾಗಿದೆ. ಆದರೆ, ಇಂತಿಷ್ಟೇ ಎಂದು ಗುರಿ ನೀಡಿಲ್ಲ. ಈ ಸಂಬಂಧ ಪರಿಶೀಲನೆ ನಡೆಸಲಾಗುವುದು ಎಂದು ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಕನ್ನಡಪ್ರಭ

# ಕೊರೋನಾ ಗುಣಮುಖ: ಇಂದು ಪಾಲಿಕೆ ಆಯುಕ್ತ ಆಸ್ಪತ್ರೆಯಿಂದ ಡಿಸ್ಚಾರ್ಜ್?

ಬೆಂಗಳೂರು: ಕೊರೋನಾ ಸೋಂಕು ದೃಢಪಟ್ಟ ಹಿನ್ನೆಲೆಯಲ್ಲಿ ನಗರದ ಮಲ್ಲಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಗುಣಮುಖರಾಗಿದ್ದು, ಸೋಮವಾರ ಆಸ್ಪತ್ರೆಯಿಂದ ಬಿಡುಗಡೆ ಆಗುವ ಸಾಧ್ಯತೆ ಇದೆ.



ನಗರದ ಕೊರೋನಾ ಸೋಂಕು ನಿಯಂತ್ರಣದ ಜವಾಬ್ದಾರಿ ಹೊತ್ತಿರುವ ಮಂಜುನಾಥ ಪ್ರಸಾದ್ ಅವರಿಗೆ ಕಳೆದ ಸೋಮವಾರ ಕೊರೋನಾ ಸೋಂಕು ಹಬ್ಬಿರುವುದು ದೃಢವಾಗಿತ್ತು. ವೈದ್ಯರ ಸಲಹೆಯ ಮೇರೆಗೆ ಆಯುಕ್ತರು ಕ್ರೆಸೆಂಟ್ ರಸ್ತೆಯಲ್ಲಿರುವ ಮಲ್ಲಿಗೆ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಆರೋಗ್ಯ ಸುಧಾರಿಸಿದ ಹಿನ್ನೆಲೆಯಲ್ಲಿ ಸೋಮವಾರ ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಸಾಧ್ಯತೆ ಇದೆ. ಇದಾದ ಬಳಿಕವೂ ಆಯುಕ್ತರು ಹೋಂ ಕ್ವಾರಂಟೈನ್ ಗೆ ಒಳಗಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕನ್ನಡಪ್ರಭ

# ಬ್ರಿಟನ್‌ನಿಂದ ಬಂದು ನಾಪತ್ತೆ ಆಗಿದ್ದವರಲ್ಲಿ 16 ಮಂದಿ ಪತ್ತೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

- ಬ್ರಿಟನ್‌ನಿಂದ ನಗರಕ್ಕೆ ಬಂದಿದ್ದ ಇನ್ನೂ 204 ಮಂದಿಗಾಗಿ ಹುಡುಕಾಟ
- ನಿನ್ನೆ ಮತ್ತೊಬ್ಬರಿಗೆ ಕೊರೋನಾ ದೃಢ
- ಸೋಂಕಿತರ ಸಂಖ್ಯೆ 15ಕ್ಕೆ ಏರಿಕೆ

ರೂಪಾಂತರಿ ಕೊರೋನಾ ವೈರಸ್ ಪತ್ತೆಯಾಗಿರುವ ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಹಿಂದಿರುಗಿರುವವರ ಪೈಕಿ ಭಾನುವಾರ ಮತ್ತೊಬ್ಬ ಒಬ್ಬ ವ್ಯಕ್ತಿಗೆ ಕೊರೋನಾ ಸೋಂಕು ದೃಢಪಟ್ಟಿದ್ದು, ತನ್ಮೂಲಕ ಒಟ್ಟು ಸೋಂಕಿತರ ಸಂಖ್ಯೆ 15ಕ್ಕೆ ಏರಿಕೆಯಾಗಿದೆ. ಈ ಮಧ್ಯೆ ಬ್ರಿಟನ್ನಿಂದ ವಾಪಸಾದ ಪ್ರಯಾಣಿಕರಲ್ಲಿ ನಾಪತ್ತೆಯಾದವರ ಪೈಕಿ 16 ಮಂದಿ ಪತ್ತೆಯಾಗಿದ್ದು, ಇನ್ನೂ 204 ಮಂದಿಗಾಗಿ ಹುಡುಕಾಟ ನಡೆದಿದೆ.

ಡಿ.1ರಿಂದ 21ವರೆಗೆ ಬ್ರಿಟನ್‌ನಿಂದ ಒಟ್ಟು 1,683 ಮಂದಿ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಈ ಪೈಕಿ 1,411 ಮಂದಿ ಪತ್ತೆ ಹಚ್ಚಿರುವ ಬಿಬಿಎಂಪಿ, 1,122 ಮಂದಿ ಕೋವಿಡ್ ಪರೀಕ್ಷೆಗೆ ಒಳಪಡಿಸಿದೆ. 773 ಮಂದಿಯ ಪರೀಕ್ಷಾ ವರದಿ ಲಭ್ಯವಾಗಿದ್ದು, 15 ಮಂದಿಗೆ ಸೋಂಕು ಪತ್ತೆಯಾಗಿದೆ. 758 ಕೋವಿಡ್ ಪರೀಕ್ಷಾ ವರದಿ ನೆಗಟಿವ್ ಬಂದಿದೆ. ಇನ್ನೂ 349 ಮಂದಿಯ ಫಲಿತಾಂಶ ಬಾಕಿ ಇದೆ. ಉಳಿದ 289 ಮಂದಿ ಪರೀಕ್ಷೆ ಬಾಕಿ ಇದೆ. ಇದುವರೆಗೆ ಪತ್ತೆಯಾಗಿರುವ 15 ಕೋವಿಡ್ ಸೋಂಕು ಪ್ರಕರಣಗಳಲ್ಲಿ ಮಹದೇವಪುರ ವಲಯದಲ್ಲಿ 5, ಬೊಮ್ಮನಹಳ್ಳಿ 4, ಪಶ್ಚಿಮ 3, ದಾಸರಹಳ್ಳಿ, ದಕ್ಷಿಣ ಹಾಗೂ ಪೂರ್ವ ವಲಯದಲ್ಲಿ ತಲಾ 1 ಪ್ರಕರಣ ಪತ್ತೆ ಯಾಗಿದೆ. ಬೆಂಗಳೂರಿನ ವಿಳಾಸ ನೀಡಿದ 66 ಮಂದಿ ಬೆಂಗಳೂರಿನಿಂದ ಹೊರ ಜಿಲ್ಲೆ ಹಾಗೂ ರಾಜ್ಯಗಳಿಗೆ ತೆರಳಿದ್ದಾರೆ. ನಾಲ್ವರು ಬ್ರಿಟನ್‌ನಿಂದ ಬೆಂಗಳೂರಿಗೆ ಆಗಮಿಸಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕನ್ನಡಪ್ರಭ

# ನಗರದಲ್ಲಿ ಶೀಘ್ರ ಎರಡು ಹೊಸ ನಿರಾಶ್ರಿತರ ಕೇಂದ್ರ

**ಬೆಂಗಳೂರು:** ಚಳಿಗಾಲ ಶುರುವಾಗುತ್ತಿರುವ ಹಿನ್ನೆಲೆಯಲ್ಲಿ ತ್ವರಿತವಾಗಿ ಎರಡು ನಿರಾಶ್ರಿತ ಕೇಂದ್ರ ಆರಂಭಿಸುವುದಕ್ಕೆ ಬಿಬಿಎಂಪಿ ಕಲ್ಯಾಣ ವಿಭಾಗದ ಅಧಿಕಾರಿಗಳು ಮುಂದಾಗಿದ್ದಾರೆ.

ನಗರದಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ನಿರ್ಗತಿಕರಿದ್ದು, ಅವರಿಗೆ ಸೂಕ್ತ ಸೂರು ಕಲ್ಪಿಸುವ ಉದ್ದೇಶದಿಂದ ಹಾಗೂ ಚಳಿಗಾಲ ಶುರುವಾಗುತ್ತಿರುವ ಹಿನ್ನೆಲೆಯಲ್ಲಿ ಜ.15ರೊಗಳಗೆ ಮೆಜೆಸ್ಟಿಕ್ ಸಮೀಪದಲ್ಲಿರುವ ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಕಚೇರಿಯ ಮೇಲ್ಭಾಗದಲ್ಲಿ 90 ಮಂದಿ ನಿರಾಶ್ರಿತರಿಗೆ ರಾತ್ರಿ ವಾಸಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಮಾರ್ಚ್ ವೇಳೆಗೆ ಟೌನ್ ಹಾಲ್ ಬಳಿಯ ಕುಂಬಾರ ಗುಂಡಿಯಲ್ಲಿ 150 ಮಂದಿ ಸಾಮರ್ಥ್ಯದ ನಿರಾಶ್ರಿತ ಕೇಂದ್ರ ಆರಂಭಿಸುವುದಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಎರಡು ಕೇಂದ್ರದಲ್ಲಿ ಈಗಾಗಲೇ ನಿರ್ಮಾಣ ಮತ್ತು ದುರಸ್ತಿ ಕಾರ್ಯ ಪೂರ್ಣಗೊಂಡಿದ್ದು, ನೀರು ಹಾಗೂ ಸ್ಯಾನಿಟರಿ ಸಂಪರ್ಕ ಬಾಕಿ ಇದೆ. ಜಲಮಂಡಳಿ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ತ್ವರಿತವಾಗಿ ಸಂಪರ್ಕ ವ್ಯವಸ್ಥೆ ಮಾಡಲಾಗುವುದು ಬಿಬಿಎಂಪಿ ಕಲ್ಯಾಣ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಈಗಾಗಲೇ 777 ಮಂದಿ ಸಾಮರ್ಥ್ಯದ 10 ನಿರಾಶ್ರಿತ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿದಿನ ಸುಮಾರು 190 ರಿಂದ 200 ನಿರ್ಗತಿಕರು ರಾತ್ರಿ ವೇಳೆ ಈ ನಿರಾಶ್ರಿತ ಕೇಂದ್ರಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ.

# ಹೊಸ ವರ್ಷ: ಇಂದು ಮಾರ್ಗಸೂಚಿ

## ಮನಸೋ ಇಚ್ಛೆ ಪಾರ್ಟಿ ಮಾಡಿದ್ರೆ ಕಠಿಣ ಕ್ರಮ: ಗೃಹ ಸಚಿವ ಬಸವರಾಜ ಬೊಮ್ಮಾಯಿ ಎಚ್ಚರಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಹೊಸ ವರ್ಷಾಚರಣೆ ವೇಳೆ ನೈಟ್ ಕರ್ಫ್ಯೂ ಇಲ್ಲ ಎಂದ ಮಾತ್ರಕ್ಕೆ ಮನಸೋ ಇಚ್ಛೆ ಪಾರ್ಟಿ, ಸಭೆ, ಸಮಾರಂಭಗಳನ್ನು ನಡೆಸುವಂತಿಲ್ಲ. ಒಂದು ವೇಳೆ ಕಾನೂನು ಉಲ್ಲಂಘಿಸಿ ವರ್ತಿಸಿದರೆ ಅಂತಹವರ ಮೇಲೆ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, ರಾಜಧಾನಿ ಬೆಂಗಳೂರಿನಲ್ಲಿ ವರ್ಷಾಚರಣೆ ಸಂಬಂಧ ಸೋಮವಾರ ಮಾರ್ಗಸೂಚಿ ಪ್ರಕಟಿಸಲಾಗುವುದು ಎಂದೂ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, ರೂಪಾಂತರಗೊಂಡ ಕೊರೋನಾ ಸೋಂಕು ತಡೆಗಟ್ಟುವ ಉದ್ದೇಶದಿಂದ ಹೊಸ ವರ್ಷಾಚರಣೆಗೆ ನಿರ್ಬಂಧ ಹಾಕಲಾಗುತ್ತಿದೆ. ಮುಂಜಾಗ್ರತಾ ಕ್ರಮಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ವತಿಯಿಂದ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಗುವುದು ಎಂದರು.



**ಸಾರ್ವಜನಿಕ ಪಾರ್ಟಿಗಿಲ್ಲ ಅವಕಾಶ:** ಹೊಸ ವರ್ಷಾಚರಣೆ ವೇಳೆ ಸಾರ್ವಜನಿಕರ ಪಾರ್ಟಿಗಳಿಗೆ ಅವಕಾಶ ನೀಡುವುದಿಲ್ಲ. ಈಗಾಗಲೇ ಮಾರ್ಗಸೂಚಿಗಳನ್ನು ಬಿಬಿಎಂಪಿ ಬಿಡುಗಡೆ ಮಾಡಿದೆ. ಪೊಲೀಸ್ ಇಲಾಖೆ ಮತ್ತು ಬಿಬಿಎಂಪಿಯಿಂದ ಮತ್ತೊಂದು ಹೊಸ ಮಾರ್ಗಸೂಚಿ ಬಿಡುಗಡೆ ಮಾಡಲಾಗುವುದು. ಮಾರ್ಗಸೂಚಿಗಳು ಯಾವ ರೀತಿ ಇರಬೇಕು ಎಂಬುದನ್ನು ಈಗಾಗಲೇ ನಗರ ಪೊಲೀಸ್ ಆಯುಕ್ತ ಕಮಲ್‌ಪಂತ್ ಮತ್ತು ಬಿಬಿಎಂಪಿ ಅಧಿಕಾರಿಗಳ ಜತೆ ಸಭೆ ನಡೆಸಲಾಗಿದೆ. ಸಾಧ್ಯವಾದರೆ ಸೋಮವಾರವೇ ಮಾರ್ಗಸೂಚಿ ಬಿಡುಗಡೆ ಮಾಡಲಾಗುವುದೆಂದರು.

**11ರ ಬಳಿಕ ಸಂಚಾರಕ್ಕೆ ಬ್ರೇಕ್:** ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚಿನ್ನಸ್ವಾಮಿ ಕ್ರೀಡಾಂಗಣ ವೃತ್ತ ಮತ್ತು ನಗರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಗಳಲ್ಲಿಯೂ ರಾತ್ರಿ 11 ಗಂಟೆ ಬಳಿಕ ಸಂಚಾರಕ್ಕೆ ನಿರ್ಬಂಧ ಹೇರಲಾಗುವುದು. ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆಯಲ್ಲಿ ಸಂಜೆ 6 ಗಂಟೆಯ ಬಳಿಕ ಸಾರ್ವಜನಿಕರು ಮತ್ತು ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ ಎಂದರು.

## ಇಂಗ್ಲೆಂಡ್‌ನಿಂದ ಬಂದವರ ಮೇಲೆ ಹೆಚ್ಚಿನ ನಿಗಾ: ಸಚಿವ

ವಿಮಾನ ನಿಲ್ದಾಣದಲ್ಲಿ ಕಟ್ಟುನಿಟ್ಟಾಗಿ ತಪಾಸಣೆ ನಡೆಸಲಾಗುತ್ತಿದ್ದು, ವಿಶೇಷವಾಗಿ ಇಂಗ್ಲೆಂಡ್‌ನಿಂದ ಬಂದವರ ಮೇಲೆ ಹೆಚ್ಚು ನಿಗಾವಹಿಸುವಂತೆ ಸೂಚಿಸಲಾಗಿದೆ. ಅಲ್ಲಿ ಹೊಸ ಮಾದರಿಯ ಸೋಂಕು ಕಾಣಿಸಿಕೊಂಡಿರುವುದರಿಂದ ರಾಜ್ಯದಲ್ಲಿಯೂ ಹರಡುವ ಸಾಧ್ಯತೆ ಇದೆ ಎಂಬ ಕಾರಣಕ್ಕಾಗಿ ತ್ವರಿತ ಕ್ರಮಗಳನ್ನು ಕೈಗೊಂಡಿದ್ದೇವೆ. ಈಗಾಗಲೇ ಆರೋಗ್ಯ ಇಲಾಖೆ ಕೆಲವು ನಿಯಮಗಳನ್ನು ಜಾರಿ ಮಾಡಿದ್ದು, ಎಲ್ಲರೂ ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು. ಇಂಗ್ಲೆಂಡ್‌ನಿಂದ ಆಗಮಿಸುವವರ ಪತ್ತೆ ಕಾರ್ಯ ಮುಂದುವರಿದಿದ್ದು, ಪ್ರತಿಯೊಬ್ಬರ ವಿಳಾಸ ಪತ್ತೆ ಹಚ್ಚುವಂತೆ ಸೂಚಿಸಲಾಗಿದೆ ಎಂದು ಹೇಳಿದರು.

## ಕೊರೋನಾಗೆ ನಿನ್ನೆ ನಗರದಲ್ಲಿ 8 ಮಂದಿ ಬಲಿ

**ಬೆಂಗಳೂರು:** ನಗರದಲ್ಲಿ ಭಾನುವಾರ 542 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 754 ಮಂದಿ ಗುಣಮುಖರಾಗಿದ್ದಾರೆ. ಎಂಟು ಮಂದಿ ಮೃತಪಟ್ಟ ವರದಿಯಾಗಿದೆ. ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,86,599 ಏರಿಕೆಯಾಗಿದೆ. ಗುಣಮುಖರ ಸಂಖ್ಯೆ 3,73,724 ತಲುಪಿದೆ. ಇನ್ನೂ 8,575 ಸಕ್ರಿಯ ಸೋಂಕಿತರಿದ್ದು, ಈ ಪೈಕಿ 97 ಮಂದಿಯ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ನಗರದ ವಿವಿಧ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ. ಇನ್ನು ಭಾನುವಾರ ನಗರದಲ್ಲಿ ಎಂಟು ಮಂದಿ ಸೋಂಕಿತರು ಮೃತಪಟ್ಟ ವರದಿಯಾಗಿದೆ. ಈ ಮೂಲಕ ಮೃತರ ಸಂಖ್ಯೆ 4,299 ಏರಿಕೆಯಾಗಿದೆ.

## ಇಂದಿನ ಸಭೆ ಬಳಿಕ ಪರಿಷ್ಕೃತ ಮಾರ್ಗಸೂಚಿ ಪ್ರಕ

**ಚಿಕ್ಕಬಳ್ಳಾಪುರ:** ಹೊಸ ವರ್ಷದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕೊರೋನಾ ಸೋಂಕು ಹರಡದಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ವಿಶೇ ಸಭೆ ನಡೆಸಿ ಪರಿಷ್ಕ ಮಾರ್ಗಸೂಚಿ ಪ್ರಕಟಿಸಲಾಗುವು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ. ತಾಲೂಕಿನ ತಮ್ಮ ಸ್ವಗ್ರಾಮ ಪೆರೇಸಂದ್ರದಲ್ಲಿ ಭಾನುವಾರ ಗ್ರಾಮ ಪಂಚಾಯ್ತಿ ಚುನಾವಣೆ ಹಿನ್ನೆಲೆಯ ಮತದಾನ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊಸ ವರ್ಷದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಈಗಾಗಲೇ ರಾಜ್ಯದ ಗೃಹ ಸಚಿವರು, ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ನೇತೃತ್ವದಲ್ಲಿ ಸಭೆ ನಡೆದು ಗೃಹ ಇಲಾಖೆ ಹಲವು ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಆದರೆ ಸೋಮವಾರ ಮತ್ತೊಮ್ಮೆ ಗೃಹ ಇಲಾಖೆ ಹಾಗೂ ಆರೋಗ್ಯ ಇಲಾಖೆ ಜಂಟಿಯಾಗಿ ಸಭೆ ನಡೆಸಿ ದೀರ್ಘವಾಗಿ ಚರ್ಚೆ ನಡೆಸಿ ಇಲಾಖೆಯಿಂದ ಹಲವು ಮಾರ್ಗಸೂಚಿಗಳನ್ನು ಪ್ರಕಟಿಸಲಾಗುವುದೆಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.



ತಂತ್ರಜ್ಞಾನದ ನೆರವು | ಐಎಫ್‌ಎಂಎಸ್ ಮೂಲಕ ಅನುದಾನಕ್ಕೆ ಮಾಹಿತಿ ಸಲ್ಲಿಸಿ | ಅಧಿಕಾರಿಗಳಿಗೆ ಸೂಚನೆ | ಇದರಿಂದ ಅನುದಾನಕ್ಕೆ ತಕ್ಕಂತೆ ಮಾತ್ರ ವೆಚ್ಚ ಸಾಧ್ಯ

# ಆದಾಯಕ್ಕಿಂತ ಹೆಚ್ಚಿನ ಮೊತ್ತದ ಬಜೆಟ್‌ಗೆ ಬಿಬಿಎಂಪಿ ಬ್ರೇಕ್

• ವಿಶ್ವನಾಥ ಮಲೇಬೆನ್ನೂರು
**ಕನ್ನಡಪ್ರಭ ವಾರ್ತೆ** ಬೆಂಗಳೂರು

ಪ್ರತಿ ವರ್ಷ ತನ್ನ ಆದಾಯ ಮೂಲಕ್ಕಿಂತ ಹೆಚ್ಚು ಮೊತ್ತದ ಆಯವ್ಯಯ ಮಂಡನೆ ಮಾಡುವ ಬಿಬಿಎಂಪಿ, ಈ ಬಾರಿ ಅದಕ್ಕೆ ಕಡಿವಾಣ ಹಾಕಲು 2021-22ನೇ ಸಾಲಿನ ಆಯವ್ಯಯಅನುದಾನಕ್ಕೆಮಾಹಿತಿಯನ್ನು ಇಂಟಿಗ್ರೇಟೆಡ್ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ (ಐಎಫ್‌ಎಂಎಸ್) ಸಾಫ್ಟ್‌ವೇರ್‌ನ ಮುಖಾಂತರವೇ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದೆ.

ಇದರಿಂದಆಯವ್ಯಯದಲ್ಲಿಒದಗಿಸಲಾದಅನುದಾನಕ್ಕೆ ಅನುಗುಣವಾಗಿ ಮಾತ್ರ ವೆಚ್ಚ ಮಾಡಬಹುದಾಗಿರುತ್ತದೆ. ಅನುದಾನ ಒದಗಿಸದೇ ಇರುವ ವೆಚ್ಚ, ಕಾರ್ಯಕ್ರಮ, ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಎಲ್ಲವೂ ಆನ್‌ಲೈನ್‌ನಲ್ಲಿ ಇರಲಿದೆ. ಹಾಗಾಗಿ, ಅತಿ ಎಚ್ಚರಿಕೆಯಿಂದ ನಿಗದಿತ ಅವಧಿಯೊಳಗೆ ವಿವರಗಳನ್ನು ಸಲ್ಲಿಕೆ ಮಾಡುವಂತೆ ಬಿಬಿಎಂಪಿ ಆಯುಕ್ತರು ಸೂಚಿಸಿದ್ದಾರೆ.

ಸ್ವೀಕೃತಿ, ಆಡಳಿತಾತ್ಮಕ ವೆಚ್ಚ, ಕಾಮಗಾರಿ ವೆಚ್ಚಗಳಿಗೆ ಸಂಬಂಧಿಸಿದಂತೆ, ಎಲ್ಲ ಬಡವಾಡೆ ಅಧಿಕಾರಿಗಳಿಂದ ಮಾಹಿತಿಯು ಕೇಂದ್ರ/ವಲಯ ಉಪನಿಯಂತ್ರಕರು (ಹಣಕಾಸು) ಅವರಿಗೆ ಸಲ್ಲಿಕೆಯಾಗುವಂತೆ ಈ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದೆ.

ಬಿಬಿಎಂಪಿಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ಬಿಲ್ ಮೊತ್ತ ಹಾಗೂ ಮುಂದುವರೆದ ಕಾಮಗಾರಿ ವಿವರ, ಕಾಮಗಾರಿಗೆ ಕಾರ್ಯಾದೇಶ ಪಡೆದಿರುವ ವಿವರ, ಕಾಮಗಾರಿಗೆ ಜಾಬ್ ಕೋಡ್ ಪಡೆದ ವಿವರ, ಟೆಂಡರ್ ಆಹ್ವಾನಿಸಲಾದ ವಿವರ, ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಕೆ ಮಾಡಿದ ವಿವರ ಹಾಗೂ ಹೊಸದಾಗಿ ಸಲ್ಲಿಕೆ ಮಾಡಿದ ಪ್ರಸ್ತಾವನೆಗಳನ್ನು ತಂತ್ರಾಂಶದ ಮೂಲಕವೇ ಸಲ್ಲಿಕೆಗೆ ವ್ಯವಸ್ಥೆ ಮಾಡಲಾಗಿದೆ. ಜತೆಗೆ ಈ ಹಿಂದೆ ಬಜೆಟ್‌ಗೆ ಸಂಬಂಧಿಸಿದಂತೆ ಮಾಹಿತಿ ನೀಡಲಾಗುತ್ತಿದ್ದ ಆಯವ್ಯಯ ಮಾಹಿತಿ ನಮೂನೆ (ಬಿಐಡಿಎಸ್) ಅನ್ನು (ಐಎಫ್‌ಎಂಎಸ್) ಸಾಫ್ಟ್‌ವೇರ್‌ನಲ್ಲಿ ಅಳವಡಿಸಲಾಗಿದೆ. ವೇತನ, ಭತ್ಯೆ, ಪಿಂಚಣಿ ಹಾಗೂ ನಿವೃತ್ತಿ ಸೌಲಭ್ಯಗಳ ಮಾಹಿತಿಯನ್ನು ತಂತ್ರಾಂಶದ ಮೂಲಕವೇ ಸಲ್ಲಿಕೆ ಮಾಡಬಹುದಾಗಿದೆ.

ಇನ್ನು 2020ರ ಡಿ.31ರ ವರೆಗೆ ಸಂಗ್ರಹಿಸಲಾದ ಆಸ್ತಿ ತೆರಿಗೆ ವಿವರ ಹಾಗೂ 2021 ಮಾ.31ರ ವರೆಗೆ ಸಂಗ್ರಹಿಸಬಹುದಾದ ವಿವರ, ಕರ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಟ್ಟಡ ಮೇಲೆ ವಿಧಿಸಬಹುದಾದ ಶುಲ್ಕ, ದಂಡ, ಬಡ್ಡಿ, ಉಪ ಕರ ಮಾಹಿತಿಯನ್ನು ಪಡೆದು ಬಿಐಡಿಎಸ್ ನಮೂನೆ ಮೂಲಕ ಸಲ್ಲಿಕೆ ನಿರ್ದೇಶಿಸಲಾಗಿದೆ.

**ಆದಾಯ, ಖರ್ಚು ಸಲ್ಲಿಕೆಗೆ ಸೂಚನೆ:** ಇನ್ನು 2019-20 ಹಾಗೂ 2020-21ನೇ ಸಾಲಿನ ಡಿಸೆಂಬರ್ ಅಂತ್ಯದ ವರೆಗೆ ಆದಾಯ, ಖರ್ಚು ವಿವರಗಳನ್ನು ಜ.4ರ ಒಳಗೆ ಸಲ್ಲಿಸಲು ಸೂಚಿಸಲಾಗಿದೆ. ಜತೆಗೆ 2021ರ ಜನವರಿಯಿಂದ ಮಾರ್ಚ್ 31ರ ವರೆಗೆ ಸಂಗ್ರಹಿಸಬಹುದಾದ ಸಂಪನ್ಮೂಲ ಹಾಗೂ ಪಾವತಿ ಅವಶ್ಯಕವಿರುವ ಅನುದಾನದ ವಿವರವನ್ನು ಐಎಫ್‌ಎಂಎಸ್ ಸಾಫ್ಟ್‌ವೇರ್‌ನ ಮುಖಾಂತರವೇ ಸಲ್ಲಿಕೆ ಮಾಡಬೇಕು. ಡಿ.31ರ ವರೆಗೆ ಮುಖ್ಯ ಆರ್ಥಿಕ ಅಧಿಕಾರಿಗಳು ನೀಡಲಾಗಿರುವ ಜಾಬ್ ಕೋಡ್ ಮಾಹಿತಿಯನ್ನು ಲೆಕ್ಕ ಶೀರ್ಷಿಕೆವಾರು ಸಲ್ಲಿಕೆಗೆ ಸೂಚಿಸಲಾಗಿದೆ.

## 22,565 ಕೋಟಿ ರು. ಬಿಲ್

ಬಿಬಿಎಂಪಿಯ ಆದಾಯಕ್ಕಿಂತ ಹೆಚ್ಚು ಬಜೆಟ್ ಮಂಡನೆ ಆಗಿರುವುದರಿಂದ ಕೇಂದ್ರದ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿಯ ಅನುದಾನದಡಿ ನಡೆಸಲಾದ ಕಾಮಗಾರಿಗಳಿಗೆ ಗುತ್ತಿಗೆದಾರರಿಗೆ ಬಿಬಿಎಂಪಿಯು ಒಟ್ಟು 22,565 ಕೋಟಿ ರು. ಬಿಲ್ ಪಾವತಿ ಬಾಕಿ ಇದೆ. ಬಜೆಟ್ ಅನುದಾನಕ್ಕೆ ಅನುಗುಣವಾಗಿ ಪ್ರತಿ ವರ್ಷ ಜಾಬ್ ಕೋಡ್ ಪಡೆದು ಕಾಮಗಾರಿ ನಡೆಸಲಾಗುತ್ತದೆ. ಹೀಗಾಗಿ, ವರ್ಷದಿಂದ ವರ್ಷಕ್ಕೆ ಬಾಕಿ ಮೊತ್ತ ಹೆಚ್ಚಾಗುತ್ತಿದೆ. ಗುತ್ತಿಗೆದಾರರಿಗೆ ಸದ್ಯ ಎರಡು ವರ್ಷಗಳ ಅಂತರದಲ್ಲಿ ಬಿಲ್ ಪಾವತಿ ಮಾಡಲಾಗುತ್ತಿದೆ. ಇನ್ನು ಹಣಕಾಸು ಸಂಸ್ಥೆಗಳ ಮೂಲಕ ಬಿಬಿಎಂಪಿ ಒಟ್ಟು 286 ಕೋಟಿ ರು. ಸಾಲ ಪಡೆದಿದೆ.

## ಚರ್ಚೆಗೆ ವೇಳಾಪಟ್ಟಿ ಸಿದ್ಧ

ಐಎಫ್‌ಎಂಎಸ್ ಸಾಫ್ಟ್‌ವೇರ್‌ನ ಮುಖಾಂತರ ಸಲ್ಲಿಕೆಯಾದ ವಿವರಗಳನ್ನು ಪರಿಶೀಲನೆಗೆ ಮಾಡಿ 2021-22ನೇ ಸಾಲಿನ ಅಂದಾಜು ಪಟ್ಟಿಯನ್ನು ಜ.4ರಿಂದ ಡಿ.12ರ ವರೆಗೆ ನಡೆಸುವುದಕ್ಕೆ ತೀರ್ಮಾನಿಸಲಾಗಿದೆ. ಜ.15ರಂದು ಬಜೆಟ್ ಅಂದಾಜು ಪಟ್ಟಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಸಲ್ಲಿಕೆ ಮಾಡಲಾಗುತ್ತದೆ. ಸ್ಥಾಯಿ ಸಮಿತಿ ಸದಸ್ಯರು ಇಲ್ಲದಿರುವುದರಿಂದ ಆಡಳಿತಾಧಿಕಾರಿಗಳೇ ಅಧಿಕಾರ ಬಳಸಿ ಪರಿಶೀಲನೆ ನಡೆಸಿ ಅಂತಿಮ ಆಯವ್ಯಯ ಸಿದ್ಧಪಡಿಸಲಿದ್ದಾರೆ.



VK
ವಿಜಯ ಕರ್ನಾಟಕ

# ಕಸ ತುಂಬಿದ್ದ ನಿವೇಶನದಲ್ಲಿ ಕೈದೋಟ ನಿರ್ಮಾಣ

## 30 X40 ಸೈಟ್‌ನಲ್ಲಿ ನಾನಾ ಮಾದರಿಯ ತರಕಾರಿ ಬೆಳೆ | ಮನೆಯ ತ್ಯಾಜ್ಯ ಗೊಬ್ಬರವಾಗಿ ಪರಿವರ್ತನೆ



**ಸತ್ಯವಾಣಿ**
ಬಸವನಗರ, ವಿಜ್ಞಾನನಗರ ವಾರ್ಡ್





▪ **ವಿಕ ಸುದ್ದಿಲೋಕ** ಬೆಂಗಳೂರು

ಕಸ ತುಂಬಿ ವ್ಯರ್ಥವಾಗಿದ್ದ ನಿವೇಶನದಲ್ಲಿ ಪುಟಾಣಿ ಕೈದೋಟ ನಿರ್ಮಿಸಿ ಮಾದರಿಯಾಗಿದ್ದಾರೆ ಸತ್ಯವಾಣಿ.

ವಿಜ್ಞಾನನಗರ ವಾರ್ಡ್‌ನ ಬಸವನಗರದಲ್ಲಿ ಸತ್ಯವಾಣಿ ಅವರು ಮನೆ ಪಕ್ಕದ ಎರಡು ಸೈಟ್‌ಗಳಲ್ಲಿ ಕೃಷಿಯನ್ನು ಮಾಡುತ್ತಿದ್ದಾರೆ. ಒಂದು ಸೈಟ್‌ನಲ್ಲಿ (30x40) ಕಳೆದ ಎಂಟು ವರ್ಷಗಳಿಂದ ಹಾಗೂ ಇನ್ನೊಂದು ಸೈಟ್‌ನಲ್ಲಿ ಎರಡೂವರೆ ವರ್ಷಗಳಿಂದ ಕೃಷಿ ಮಾಡುತ್ತಿದ್ದಾರೆ.

ಒಂದು ಸೈಟ್‌ನಲ್ಲಿ ನೆಟ್ಟ ಗಿಡಳೆಲ್ಲವೂ ಮರಗಳಾಗಿವೆ. ಸೆಟ್‌ಬ್ಯಾಕ್ ಪ್ರದೇಶದಲ್ಲಿ ಮರಗಳು ಬೆಳೆದಿರುವುದರಿಂದ ಸಮಸ್ಯೆಗಳೇ ಇಲ್ಲ. ಎರಡೂ ಕೃಷಿ ಭೂಮಿಯಲ್ಲಿ ತೆಂಗು, ಮಾವು, ನಿಂಬೆ, ಬಾಳೆ, ನುಗ್ಗೆ, ಪಪ್ಪಾಯ, ಸಪೋಟ ಬೆಳೆದಿದ್ದಾರೆ. ಇನ್ನೊಂದೆಡೆ ಮೆಂತೆ, ಪಾಲಕ್, ಕೊತ್ತಂಬರಿ, ಪುದಿನಾ ಸೇರಿದಂತೆ ಎಲ್ಲಾ ರೀತಿಯ ಸೊಪ್ಪುಗಳಿವೆ. ಒಂದೆಲಗ, ದೊಡ್ಡಪತ್ರೆ, ತುಳಸಿ, ಇನ್ಸುಲಿನ್ ಗಿಡ, ತುಂಬೆ ಗಿಡಗಳೂ ಇವೆ. ಬೆಂಡೆ, ಬದನೆ, ಟೊಮೆಟೊ, ಆಲೂಗಡ್ಡೆ, ನೀರುಳ್ಳಿ ಸೇರಿದಂತೆ ನಾನಾ ಮಾದರಿಯ ತರಕಾರಿಗಳು ಇವರ ತೋಟದಲ್ಲಿವೆ. ಸೇವಂತಿಗೆ, ಗುಲಾಬಿ, ಮಲ್ಲಿಗೆ ಹೂವುಗಳಿವೆ.

ಸಾಧಕ ರೈತರಿಗೆ ವಿಕ ಪುರಸ್ಕಾರ

ಬಿ ಪ್ಯಾಕ್ ಸದಸ್ಯರಾಗಿರುವ ಇವರು ತೋಟಗಾರಿಕಾ ಇಲಾಖೆಯ ನೇತೃತ್ವದಲ್ಲಿ ಟೆರೇಸ್ ಗಾರ್ಡನ್ ಬಗ್ಗೆ ತರಬೇತಿಯನ್ನು ಆಗಾಗ್ಗೆ ಆಯೋಜಿಸುತ್ತಿರುತ್ತಾರೆ. ಖಾಲಿ ನಿವೇಶನದಲ್ಲಿ ತೋಟ, ಟೆರೇಸ್ ಗಾರ್ಡನ್ ಮಾಡಲು ಮಾರ್ಗದರ್ಶನ ನೀಡುತ್ತಾರೆ. ಕಳೆದ 15 ವರ್ಷಗಳಿಂದ ಇವರು ಮನೆಯ ಅಗತ್ಯಕ್ಕಾಗಿ ಹೂವುಗಳನ್ನು ಖರೀದಿಸಿಲ್ಲ.

ಕೃಷಿಗೆ ಬೇಕಾದ ಗೊಬ್ಬರವನ್ನು ಮನೆಯಲ್ಲಿಯೇ ತಯಾರಿಸಿಕೊಳ್ಳುತ್ತಾರೆ. ಮನೆಯ ಹಸಿ ಕಸವನ್ನು ಬಿಬಿಎಂಪಿಗೆ ನೀಡದೆ ಗೊಬ್ಬರ ತಯಾರಿಗೆ ಬಳಸಿಕೊಳ್ಳುತ್ತಾರೆ. ಇದೀಗ ಪೈಪ್ ಕಂಪೋಸ್ಟಿಂಗ್ ಬಗ್ಗೆ ತರಬೇತಿ ನೀಡಲು ತಯಾರಿ ನಡೆಸುತ್ತಿದ್ದಾರೆ.

**ಸಂಪರ್ಕ: 9964454083**

VK
ವಿಜಯ ಕರ್ನಾಟಕ

# 542 ಮಂದಿಗೆ ಕೊರೊನಾ ಸೋಂಕು

**ಬೆಂಗಳೂರು:** ನಗರದಲ್ಲಿ ಭಾನುವಾರ 542 ಹೊಸ ಕೋವಿಡ್-19 ಪ್ರಕರಣಗಳು ಕಂಡುಬಂದಿದ್ದು, 8 ಮಂದಿ ಮೃತಪಟ್ಟಿದ್ದಾರೆ. ಸೋಂಕಿನಿಂದ ಮುಕ್ತರಾಗಿ ನಾನಾ ಆಸ್ಪತ್ರೆಗಳಿಂದ 754 ಮಂದಿ ಬಿಡುಗಡೆಗೊಂಡಿದ್ದು, ಇದುವರೆಗೆ ಬಿಡುಗಡೆಯಾದವರ ಸಂಖ್ಯೆ 3,73,724ಕ್ಕೇರಿದೆ. ಪ್ರಸ್ತುತ, 8,575 ಸಕ್ರಿಯ ಪ್ರಕರಣಗಳಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 3,86,599 ದಾಟಿದೆ. ಸೋಂಕಿನಿಂದ ಇದುವರೆಗೆ 4,299 ಮಂದಿ ಸಾವಿಗೀಡಾಗಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1
ಕನ್ನಡ ದಿನಪತ್ರಿಕೆ

# ನಗರದಲ್ಲಿ 542 ಹೊಸ ಸೋಂಕಿತರು

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಭಾನುವಾರ ಹೊಸದಾಗಿ 542 ಕರೊನಾ ಸೋಂಕಿತರು ಪತ್ತೆಯಾಗಿದ್ದು, 754 ಜನರು ಸೋಂಕಿನಿಂದ ಗುಣಮುಖರಾಗಿದ್ದಾರೆ. ಒಟ್ಟು ಸೋಂಕಿತರ ಸಂಖ್ಯೆ 3.86 ಲಕ್ಷ ಹಾಗೂ ಬಿಡುಗಡೆಯಾದವರ ಸಂಖ್ಯೆ 3.73 ಲಕ್ಷ ಆಗಿದೆ. 8,575 ಸಕ್ರಿಯ ಪ್ರಕರಣಗಳಿದ್ದು, ಇವರಲ್ಲಿ 97 ಸೋಂಕಿತರು ಐಸಿಯುನಲ್ಲಿದ್ದಾರೆ. ಭಾನುವಾರ 8 ಸೋಂಕಿತರು ಮೃತಪಡುವುದರೊಂದಿಗೆ ಒಟ್ಟು ಮೃತಪಟ್ಟವರ ಸಂಖ್ಯೆ 4,299ಕ್ಕೆ ಏರಿದೆ.

Bengaluru Edition
Dec 28, 2020 Page No. 2
Powered by : eReleGo.com

ವಿಶ್ವವಾಣಿ

ವಾಹನಗಳಿಗೆ ಜಿಪಿಎಸ್ ಅಳವಡಿಕೆ ಮಾಡುವ ಮೂಲಕ ನಿಗಾ । ಪ್ರತ್ಯೇಕ ಮೊಬೈಲ್ ಆ್ಯಪ್ ಅಭಿವೃದ್ಧಿ

# ವಿಷಕಾರಿ ತ್ಯಾಜ್ಯ ವಿಲೇವಾರಿ ನಿಯಂತ್ರಣಕ್ಕೆ ಕ್ರಮ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ವಿಷಕಾರಿ ಕಸವನ್ನು ಸಿಕ್ಕಸಿಕ್ಕಲ್ಲಿ ಸುರಿಯುವ ವಾಹನಗಳನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮುಂದಾಗಿದ್ದು, ವಾಹನಗಳಿಗೆ ಜಿಪಿಎಸ್ ಅಳವಡಿಕೆ ಮಾಡುವ ಮೂಲಕ ನಿಗಾವಹಿಸುವ ವ್ಯವಸ್ಥೆ ರೂಪಿಸಲಾಗಿದೆ.

ಕೈಗಾರಿಕೆ, ವೈದ್ಯಕೀಯ ಸೇರಿದಂತೆ ಅನೇಕ ವಿಷಕಾರಿ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಸುರಿಯುತ್ತಿದ್ದ ವಾಹನಗಳಿಗೆ ನಿಯಂತ್ರಣ ಹೇರಲು ಮಂಡಳಿ ನಿರ್ಧರಿಸಿದೆ. ರಾಜಕಾಲುವೆಗಳಿಗೆ ಹಾಗೂ ಕೆರೆಗಳಿಗೆ ಕೈಗಾರಿಕೆಗಳ ಕೊಳಚೆ ನೀರನ್ನು ಹರಿಯಬಿಡುತ್ತಿರುವ ಬಗ್ಗೆ ಹಾಗೂ . ತ್ಯಾಜ್ಯಗಳು ಕೆರೆಗಳನ್ನು ಸೇರುತ್ತಿರುವುದರಿಂದ ಕುಡಿಯುವ ನೀರು ಕಲುಷಿತವಾಗುತ್ತಿದೆ ಎಂದು ಮಂಡಳಿಗೆ ನಿರಂತರ ದೂರುಗಳು ಬರುತ್ತಿದ್ದು, ಕೆಲ ಕೈಗಾರಿಕೆಗಳಿಗೆ ಎಚ್ಚರಿಕೆಯ ನೋಟಿಸ್ ನೀಡಲಾಗಿದೆ.

ಪ್ರಮುಖ ಕೈಗಾರಿಕಾ ಪ್ರದೇಶಗಳಿಂದ ಕೈಗಾರಿಕಾ ತ್ಯಾಜ್ಯ ನೀರು ಹರಿದುಬರುತ್ತಿದೆ ಎಂದು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಈ ಹಿಂದೆ ಲೋಕಾಯುಕ್ತಕ್ಕೆ ವರದಿ ನೀಡಿತ್ತು. ಈ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವಂತೆ ಕೆಎಸ್ಪಿಸಿಬಿಗೆ ಲೋಕಾಯುಕ್ತ ಆದೇಶಿಸಿದ್ದ ಹಿನ್ನೆಲೆ ಮಂಡಳಿಯು ರಾಜಕಾಲುವೆಗಳಿಗೆ ತ್ಯಾಜ್ಯ ನೀರನ್ನು ಹರಿಯಬಿಡುವ 76 ಕೈಗಾರಿಕೆಗಳನ್ನು ಮುಚ್ಚುವಂತೆ ಕಳೆದ ಜನವರಿಯಲ್ಲಿ ನೋಟಿಸ್ ನೀಡಿತ್ತು. ಈಗ ತ್ಯಾಜ್ಯ



ನೀರನ್ನು ಸಾಗಿಸುವ ಎಲ್ಲ 70 ವಾಹನಗಳಿಗೆ ಮಂಡಳಿಯು ಜಿಪಿಎಸ್ ಅಳವಡಿಕೆ ಮಾಡಲಾಗಿದೆ.

ತ್ಯಾಜ್ಯ ನೀರು ಸಂಸ್ಕರಣೆಯ 10 ಘಟಕಗಳು (ಸಿಇಟಿಪಿ) ರಾಜ್ಯದಲ್ಲಿವೆ. ಅವು ಸುಮಾರು ಒಂದು ಸಾವಿರ ಕೈಗಾರಿಕೆಗಳ ತ್ಯಾಜ್ಯವನ್ನು ಸಂಸ್ಕರಣೆ ಮಾಡುತ್ತಿವೆ. ಇಷ್ಟು ದಿನ ತ್ಯಾಜ್ಯ ನೀರನ್ನು ಕೆಲ ಕೈಗಾರಿಕೆಗಳು ಸಾರ್ವಜನಿಕ ಪ್ರದೇಶಗಳಲ್ಲಿ ಹರಿಬಿಡುತ್ತಿದ್ದವು. ಕಸವನ್ನೂ ಮನಬಂದಲ್ಲಿ ಹಾಕುತ್ತಿದ್ದವು. ಈ ಬಗ್ಗೆ ದೂರುಗಳು ಬರುತ್ತಿದ್ದವು. ಇದನ್ನು ತಡೆಯಬೇಕೆಂಬ ಉದ್ದೇಶದಿಂದ ನಾವೇ ಎಲ್ಲ 70 ವಾಹನಗಳಿಗೆ ಜಿಪಿಎಸ್ ತಂತ್ರಜ್ಞಾನವನ್ನು ಅಳವಡಿಕೆ ಮಾಡಿಸಿದ್ದೇವೆ. ಇದರಿಂದ ಆ ವಾಹನಗಳ ಮೇಲೆ ವಾರದ ಎಲ್ಲ ದಿನಗಳು ನಿಗಾ ಇಡಲು ಸಾಧ್ಯವಾಗುತ್ತದೆ' ಎಂದು ಮಂಡಳಿಯ ಸದಸ್ಯ ಕಾರ್ಯದರ್ಶಿ ಶ್ರೀನಿವಾಸಲು ತಿಳಿಸಿದರು.

**ಮಾಲಿನ್ಯವನ್ನು ನಿಯಂತ್ರಣ ಮಾಡಲು ಹಾಗೂ ಹೆಚ್ಚು ಕೈಗಾರಿಕಾ ತ್ಯಾಜ್ಯ ಹೊರಹಾಕುವ ಕೈಗಾರಿಕೆಗಳ ಮೇಲೆ ನಿಗಾ ಇಡಲು ಕಂಟ್ರೋಲ್ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕೇಂದ್ರವು ಪ್ರತಿ 15 ನಿಮಿಷಕ್ಕೊಮ್ಮೆ ಕಾರ್ಖಾನೆಗಳ ವಾಯು, ಶಬ್ದ ಮತ್ತು ಜಲ ಮಾಲಿನ್ಯದ ಮಾಹಿತಿಯನ್ನು ಅಪ್ಡೇಟ್ ಮಾಡಲಿವೆ. ನಿಗದಿಗಿಂತ ಹೆಚ್ಚು ಮಾಲಿನ್ಯವಿದ್ದಲ್ಲಿ ಕಾರ್ಖಾನೆಗೆ ಸ್ವಯಂಚಾಲಿತ ಸಂದೇಶ ಹೋಗಲಿವೆ. ಅದೇ ಕೇಂದ್ರದಿಂದ ತ್ಯಾಜ್ಯ ವಿಲೇವಾರಿ ವಾಹನಗಳನ್ನೂ ನಿರ್ವಹಿಸಲಾಗುವುದು**

**- ಶ್ರೀನಿವಾಸಲು,**
ಜಲಮಂಡಳಿ ಸದಸ್ಯ ಕಾರ್ಯದರ್ಶಿ

**ಪ್ರತ್ಯೇಕ ಮೊಬೈಲ್ ಆ್ಯಪ್ ಅಭಿವೃದ್ಧಿ :** ಕೈಗಾರಿಕಾ ತ್ಯಾಜ್ಯ ಮತ್ತು ಅಪಾಯಕಾರಿ ತ್ಯಾಜ್ಯಗಳನ್ನು ಸಾಗಿಸುವ ವಾಹನಗಳ ವಿವರ ಹಾಗೂ ಅವುಗಳು ಸಾಗುವ ಮಾರ್ಗದ ಮಾಹಿತಿ ಪಡೆದುಕೊಳ್ಳುವ ಸಲುವಾಗಿ ಮೊಬೈಲ್ ಆ್ಯಪ್‌ನ್ನು ಮಂಡಳಿ ಅಭಿವೃದ್ಧಿಪಡಿಸಿದ್ದು,ಇದರಿಂದ ವಾಹನದ ಚಲನವಲನವನ್ನು ಪಡೆದುಕೊಳ್ಳಲು ಸಾಧ್ಯ. ಮಂಡಳಿಯಲ್ಲಿ ಕಮಾಂಡ್ ಕಂಟ್ರೋಲ್ ಕೇಂದ್ರವು ಇದನ್ನು ನಿರ್ವಹಿಸಲಿದ್ದು, ಇದಕ್ಕಾಗಿ ಇಬ್ಬರು ಸಿಬ್ಬಂದಿಗಳನ್ನು ನಿಯೋಜಿಸಲಾಗುವುದು.

ಉದಯವಾಣಿ
ಜನಮನದ ಜೀವನಾಡಿ

# ನಗರದಲ್ಲಿ ಹಸಿ ಕಸಕ್ಕಾಗಿ ಹಗ್ಗಜಗ್ಗಾಟ!

## ಹಸಿತ್ಯಾಜ್ಯ ಹೆಚ್ಚಳದ ಗುರಿ? | ಪಾಲಿಕೆ ಅಧಿಕಾರಿ, ಹಂದಿ ಸಾಗಾಣಿಕೆದಾರರ ನಡುವೆ ಗುದ್ದಾಟ

**ಬೆಂಗಳೂರು:** ನಗರದಲ್ಲಿ ಹಸಿಕಸ ಪ್ರಮಾಣ ಹೆಚ್ಚಳ ಮಾಡುವಂತೆ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ವಿಭಾಗದ ಅಧಿಕಾರಿಗಳಿಗೆ ನೀಡಿರುವ ನಿರ್ದೇಶನ ಪರೋಕ್ಷವಾಗಿ ಹಂದಿ ಸಾಕಾಣಿಕೆದಾರರ ಮೇಲೆ ಪರಿಣಾಮ ಬೀರುತ್ತಿದೆ!

ಹಸಿಕಸ ಪ್ರಮಾಣ ಹೆಚ್ಚಳ ಮಾಡಲು ಅಧಿಕಾರಿಗಳು ಹಂದಿ ಸಾಗಾಣಿಕೆದಾರರು ತೆಗೆದುಕೊಂಡು ಹೋಗುವ ಹಸಿಕಸವನ್ನು ವಶಕ್ಕೆ ಪಡೆದುಕೊಳ್ಳುತ್ತಿರುವ ಬಗ್ಗೆ ಪಾಲಿಕೆಯ ಅಧಿಕಾರಿಗಳೇ ವಿಚಿತಪಡಿಸಿದ್ದಾರೆ.

ನಗರದ ಪ್ರತಿ ವಾರ್ಡ್‌ನಿಂದ ಹಸಿಕಸ ಪ್ರಮಾಣ ಹೆಚ್ಚಳ ಮಾಡಬೇಕು ಎಂದು ಬಿಬಿಎಂಪಿಯ ಘನತ್ಯಾಜ್ಯ ವಿಭಾಗದ ಅಧಿಕಾರಿಗಳು ಎಲ್ಲ ವಾರ್ಡ್‌ನ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದು, ಹಸಿಕಸ ವಿಂಗಡಣೆ ಪ್ರಮಾಣ ಹೆಚ್ಚಿಗೆ ಮಾಡದೆ ಇರುವ ಆರೋಗ್ಯ ಮತ್ತು ಘನತ್ಯಾಜ್ಯ ವಿಭಾಗದ ಅಧಿಕಾರಿಗಳ ಮೇಲೆ ಕ್ರಮಕ್ಕೆ ಮುಂದಾಗಿದ್ದಾರೆ. ಅಲ್ಲದೆ, ಪಾಲಿಕೆಯ ಅಧಿಕಾರಿಗಳು ಆಯಾ ವಾರ್ಡ್‌ನಲ್ಲಿ ಕಸ ಸಂಗ್ರಹ ಮಾಡುವುದು ಮತ್ತು ಬ್ಲಾಕ್‌ಸ್ಪಾಟ್ ಇಲ್ಲದೆ ಸ್ವಚ್ಛತೆ ಕಾಪಾಡಿಕೊಳ್ಳುವುದು ಸೇರಿದಂತೆ ಅವರ ಕಾರ್ಯಕ್ಷಮತೆಯ ಆಧಾರದ ಮೇಲೆ ರ್‍ಯಾಂಕಿಂಗ್ ಹಾಗೂ ಪ್ರಮಾಣ ಪತ್ರ ನೀಡಲಾಗುತ್ತಿದೆ. ಇದೇ ವೇಳೆ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸದ ಅಧಿಕಾರಿಗಳ ಮೇಲೆ ಕ್ರಮಕ್ಕೂ ಚಿಂತನೆ ನಡೆದಿದೆ. ಹೊಸ ಟೆಂಡರ್‌ದಾರರಿಗೂ ಕೆಲವು ನಿರ್ದಿಷ್ಟ ಸೂಚನೆಗಳನ್ನು ನೀಡಲಾಗಿದೆ. ಇದನ್ನು ಪಾಲನೆ ಮಾಡದೆ ಇದ್ದರೆ, ಟೆಂಡರ್ ರದ್ದುಪಡಿಸುವುದಾಗಿಯೂ ಎಚ್ಚರಿಕೆ ನೀಡಲಾಗಿದೆ. ಇದು ವ್ಯವಸ್ಥೆ ಸುಧಾರಿಸುವ ಬದಲು ಅಧಿಕಾರಿಗಳು ಅಡ್ಡದಾರಿ ಹಿಡಿಯಲು ಮುಂದಾಗಿದ್ದಾರೆ.

**ನಮಗೆ ಬೇರೆ ಮಾರ್ಗ ಕಾಣಿಸುತ್ತಿಲ್ಲ:** 'ಪ್ರತಿ ವಾರ್ಡ್‌ನಿಂದ 10ಟನ್ ಹಸಿಕಸ ಸಂಗ್ರಹಿಸುವ ಗುರಿ ನೀಡಲಾಗಿದೆ. ಇದೀಗ ರಾಜರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ 5ರಿಂದ 6 ಮೆಟ್ರಿಕ್‌ಟನ್ ಹಸಿಕಸ ಮಾತ್ರ ಸಂಗ್ರಹವಾಗುತ್ತಿದೆ. ಒತ್ತಡದಿಂದ ಹಂದಿ ಸಾಗಾಣಿಕೆದಾರರು ತೆಗೆದುಕೊಂಡು ಹೋಗುವ ಹಸಿಕಸವನ್ನೂ ವಶಕ್ಕೆ ಪಡೆಯುತ್ತಿದ್ದೇವೆ. ನಮಗೆ ಬೇರೆ ಮಾರ್ಗ ಕಾಣಿಸುತ್ತಿಲ್ಲ' ಎಂದು ಹೆಸರು ಹೇಳಲಿಚ್ಛಿಸದ ಅಧಿಕಾರಿ ತಿಳಿಸಿದರು.

### ಸಗಟು ತ್ಯಾಜ್ಯ ಉತ್ಪಾದಕರ ಕಸ ಸಹ ವಶಕ್ಕೆ ?

ಪಾಲಿಕೆ ವ್ಯಾಪ್ತಿಯಲ್ಲಿ ಹಸಕಸ ಪ್ರಮಾಣ ಹೆಚ್ಚಳ ಹಾಗೂ ಹಸಿಕಸ ತೂಕ ಹೆಚ್ಚಿಸಿಕೊಳ್ಳಲು ಪಾಲಿಕೆ ಯ ಘನತ್ಯಾಜ್ಯ ವಿಭಾಗದ ಅಧಿಕಾರಿಗಳು ಸಗಟು ತ್ಯಾಜ್ಯ ಉತ್ಪಾದಕರಿಂದಲೂ ಹಸಿಕಸವನ್ನು ಕಾಂಪ್ಯಾಕ್ಟರ್‌ಗೆ ತುಂಬಿಸಿಕೊಳ್ಳುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಸಗಟು ತ್ಯಾಜ್ಯ ಉತ್ಪಾದಕರ ವಾಹನದಿಂದ ಪಾಲಿಕೆಯ ಆಟೋ ಟಿಪ್ಪರ್‌ಗೆ ಹಸಿಕಸ ಸುರಿದುಕೊಳ್ಳುತ್ತಿರುವ ವಿಡಿಯೋ ಉದಯವಾಣಿಗೆ ಲಭ್ಯವಾಗಿ ದೆ. ರಾಜರಾಜೇಶ್ವರಿ ನಗರದ ಪಾಲಿಕೆಯ ಆಟೋ ಟಿಪ್ಪರ್ ಸಂಖ್ಯೆ ಕೆಎ04, ಎಜಿ 4186ಯ ವಾಹನಕ್ಕೆ ನಿರ್ಜನ ಪ್ರದೇಶದಲ್ಲಿ ಸಗಟು ತ್ಯಾಜ್ಯ ಉತ್ಪಾದಕರು ಎಂದು ಹೇಳಲಾದ ವಾಹನದಿಂದ ಕಸ ತುಂಬಿಸಿಕೊಳ್ಳುವ ದೃಶ್ಯ ಸೆರೆಯಾಗಿದೆ.

### ಹಸಿಕಸ ಪ್ರಮಾಣ ಹೆಚ್ಚಳಕ್ಕೆ ಗುರಿ ನೀಡಿಲ್ಲ

ನಗರದ ಯಾವುದೇ ವಾರ್ಡ್‌ನಿಂದ ಇಂತಿಷ್ಟೇ ಕಸ ಸಂಗ್ರಹ ಮಾಡಬೇಕು ಎಂದು ಯಾವುದೇ ಗುರಿ ನೀಡಿಲ್ಲ ಎಂದು ಬಿಬಿಎಂಪಿ ( ಘನತ್ಯಾಜ್ಯ ನಿರ್ವಹಣೆ) ಮುಖ್ಯ ಎಂಜಿನಿಯರ್ ವಿಶ್ವನಾಥ್ ತಿಳಿಸಿದರು. ಈ ಕುರಿತು ಉದಯವಾಣಿ ಜತೆ ಮಾತನಾಡಿದ ಅವರು, ಕಾಂಪ್ಯಾಕ್ಟರ್‌ಗಳಲ್ಲಿ ಹೆಚ್ಚು ಹಸಿಕಸ ಸಂಗ್ರಹವಾಗುವಂತೆ ಮನೆ– ಮನೆಯಿಂದ ಹಸಿಕಸ ಸಂಗ್ರಹ ಮಾಡುವುದಕ್ಕೆ ಸೂಚನೆ ನೀಡಿದ್ದೇವೆ. ಆದರೆ, ಇಂತಿಷ್ಟೇ ಎಂದು ಗುರಿ ನೀಡಿಲ್ಲ. ಈ ಕುರಿತು ಪರಿಶೀಲಿಸ ಲಾಗುವುದು ಎಂದರು.

ಉದಯವಾಣಿ
ಜನಮನದ ಜೀವನಾಡಿ

# 2 ನಿರಾಶ್ರಿತ ಕೇಂದ್ರ ಶೀಘ್ರ

**ಬೆಂಗಳೂರು:** ಕಳೆದ ಎರಡು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಮೆಜೆಸ್ಟಿಕ್ ಸಮೀಪದ ಹಾಗೂ ಟೌನ್ ಹಾಲ್ ಬಳಿಯ ಕುಂಬಾರಗುಂಡಿ ಭಾಗದಲ್ಲಿ ನಿರಾಶ್ರಿತ ಕೇಂದ್ರಗಳನ್ನು ಶೀಘ್ರ ಪ್ರಾರಂಭಿಸಲು ಪಾಲಿಕೆ ಮುಂದಾಗಿದೆ. ಜ.15ರ ಒಳಗೆ ಮೆಜೆಸ್ಟಿಕ್ ಸಮೀಪದಲ್ಲಿರುವ ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಕಚೇರಿಯ ಮೇಲ್ಭಾಗದಲ್ಲಿ 90 ಮಂದಿ ನಿರಾಶ್ರಿತರಿಗೆ ಹಾಗೂ ಮಾರ್ಚ್ ಒಳಗೆ ಟೌನ್‌ಹಾಲ್ ಬಳಿಯ ಕುಂಬಾರ ಗುಂಡಿಯಲ್ಲಿ 150 ಮಂದಿ ಸಾಮರ್ಥ್ಯದ ನಿರಾಶ್ರಿತ ಕೇಂದ್ರದಲ್ಲಿ ರಾತ್ರಿ ವಾಸಕ್ಕೆ ವ್ಯವಸ್ಥೆ ಮಾಡಲಾಗುವುದು. ಈ ಎರಡು ಕೇಂದ್ರದಲ್ಲಿ ಈಗಾಗಲೇ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ನೀರು ಹಾಗೂ ಒಳಚರಂಡಿ ಪೈಪ್‌ಲೈನ್ ವ್ಯವಸ್ಥೆ ಕಲ್ಪಿಸುವುದು ಬಾಕಿ ಇದೆ ಎಂದು ಪಾಲಿಕೆಯ ಕಲ್ಯಾಣ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ

# ನಗರದಲ್ಲಿ ಶೌಚಾಲಯದ ಕೊರತೆ...

**ಸಂ.ಕ ಸಮಾಚಾರ ಬೆಂಗಳೂರು**

ಸುಮಾರು ಒಂದು ಕೋಟಿ ಜನಸಂಖ್ಯೆ ಇರುವ ಉದ್ಯಾನನಗರಿಯಲ್ಲಿ ಸಾರ್ವಜನಿಕ ಶೌಚಾಲಯಗಳೇ ಇಲ್ಲವಾಗಿದೆ. ಈಗ ಇರುವುದು ಕೇವಲ 550 ಸಾರ್ವಜನಿಕ ಶೌಚಾಲಯಗಳು ಮಾತ್ರ.

ಎರಡು ದಶಕಗಳಿಗೂ ಮುನ್ನ 60ರಿಂದ 70 ಲಕ್ಷ ಜನಸಂಖ್ಯೆ ಇದ್ದ ಬೆಂಗಳೂರಿನಲ್ಲಿ 2 ಸಾವಿರಕ್ಕೂ ಹೆಚ್ಚು ಸಾರ್ವಜನಿಕ ಶೌಚಾಲಯಗಳಿದ್ದವು. ಬೆಂಗಳೂರು ಬೆಳವಣಿಗೆ ಆದಂತೆಲ್ಲ ಸಾರ್ವಜನಿಕ ಶೌಚಾಲಯಗಳು ತೆರವಾಗಿದ್ದರಿಂದ ಸಾರ್ವಜನಿಕರು ಬಯಲನ್ನೇ ಆಶ್ರಯಿಸಬೇಕಾಯಿತು.

ಈ ಬಗ್ಗೆ ಮಾಧ್ಯಮಗಳಲ್ಲಿ ಸಾಕಷ್ಟು ವರದಿಗಳು ಬಂದರೂ ಪಾಲಿಕೆ ಮಾತ್ರ ಎಚ್ಚೆತ್ತುಕೊಳ್ಳಲಿಲ್ಲ. ಈ ಬಗ್ಗೆ ನಾಗರಿಕರು ಪ್ರಶ್ನೆ ಮಾಡಿದಾಗಲೆಲ್ಲ ನಗರದಲ್ಲಿ 500 ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡಲಾಗುವುದು ಎಂದು ಬುರಡೆ ಬಿಟ್ಟಿದ್ದನ್ನು ಬಿಟ್ಟರೆ ಎಲ್ಲಿಯೂ ಸಾರ್ವಜನಿಕ ಶೌಚಾಲಯಗಳು ನಿರ್ಮಾಣವಾಗಲೇ ಇಲ್ಲ. ನಿರ್ಮಾಣವಾಗುವುದಿರಲಿ. ಇರುವ ಶೌಚಾಲಯಗಳೇ ಮುಚ್ಚುವ ಸ್ಥಿತಿಗೆ ಬಂದಿವೆ. ನಿರ್ವಹಣೆ ನೆಪ ಒಡ್ಡಿ ಹಲವಾರು ಕಡೆಗಳಲ್ಲಿ ಶೌಚಾಲಯಗಳನ್ನು ಮುಚ್ಚಲಾಗಿದೆ. ಇದರಿಂದ ನಗರದಲ್ಲಿ ಮತ್ತಷ್ಟು ಶೌಚಾಲಯಗಳ ಕೊರತೆ ಕಂಡುಬಂದಿದೆ. ಇ ಟಾಯ್ಲೆಟ್ ಸ್ಥಾಪನೆ ಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ. ಆದರೆ, ಇದು ಎಲ್ಲ ಕಡೆ ಕಾರ್ಯಗತವೇ ಆಗುತ್ತಿಲ್ಲ.

1985ರ ದಶಕದಲ್ಲಿ ಬೆಂಗಳೂರು ನಗರದಿಂದ 10 ಕಿ.ಮೀ. ಸಾಗುವ ಪ್ರಮುಖ ರಸ್ತೆ ಬದಿಯಲ್ಲೇ ಕನಿಷ್ಠ ಪಕ್ಷ 10 ಶೌಚಾಲಯಗಳಾದರೂ ಇದ್ದವು. ಆದರೆ, ಈಗ 10 ಕಿ.ಮೀ. ದೂರ ಸಾಗಿದರೂ ಒಂದೂ ಶೌಚಾಲಯ ಇಲ್ಲದಂತಹ ಸ್ಥಿತಿ ಇದೆ. ಇದರಿಂದಲೇ ನಾಗರಿಕರು ಬಯಲನ್ನೇ ಆಶ್ರಯಿಸುತ್ತಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ ಇರುವ ಸಾರ್ವಜನಿಕ ಶೌಚಾಲಯಗಳು ತೀರಾ ಕಡಿಮೆ 198 ವಾರ್ಡ್‌ಗಳ ಪೈಕಿ 80ಕ್ಕೂ ಹೆಚ್ಚು ವಾರ್ಡ್‌ಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಶೌಚಾಲಯಗಳಿವೆ. ಪ್ರಸ್ತುತ ನಗರದಲ್ಲಿ ಬಿಬಿಎಂಪಿ ವತಿಯಿಂದ ನಿರ್ವಹಣೆ ಮಾಡುತ್ತಿರುವುದು ಕೇವಲ 100 ಶೌಚಾಲಯಗಳು ಮಾತ್ರ. ಉಳಿದವು ಖಾಸಗಿಯವರ ಮೂಲಕ ನಿರ್ವಹಣೆಯಾಗುತ್ತಿವೆ. ಇಲ್ಲಿ ಹಣ ಕೊಟ್ಟ ಶೌಚಾಲಯವನ್ನು ಉಪಯೋಗಿಸಬೇಕಾದ ಅನಿವಾರ್ಯತೆ. ಕೆಲವು ಶೌಚಾಲಯಗಳಲ್ಲಿಯಂತೂ ದುಪ್ಪಟ್ಟು ಶುಲ್ಕ ನಿಗದಿ ಮಾಡಿರುವುದರಿಂದ ಜನತೆ ಕಾಂಪೌಂಡ್ ಬದಿ, ಮರದ ಮರೆಯಲ್ಲಿ ಪ್ರಕೃತಿ ಕರೆಯನ್ನು ತೀರಿಸಿಕೊಳ್ಳುತ್ತಿದ್ದಾರೆ.

ನಗರದಲ್ಲಿ ಶೌಚಾಲಯಗಳ ಕೊರತೆ ಕಂಡು ಕೆಲವು ದಾನಿಗಳು ಶೌಚಾಲಯಗಳನ್ನು ನಿರ್ಮಿಸಿಕೊಟ್ಟಿದ್ದರೂ ಅವುಗಳ ನಿರ್ವಹಣೆಯೂ ಸರಿಯಾಗಿ ಆಗುತ್ತಿಲ್ಲ. ಇಂತಹ ಕಡೆಗಳಲ್ಲಿ ನೀರು ಕೂಡಾ ಲಭ್ಯವಾಗುತ್ತಿಲ್ಲ. ಇದರ ಲಾಭವನ್ನು ಖಾಸಗಿಯಾಗಿ ನಿರ್ವಹಣೆ ಮಾಡುತ್ತಿರುವವರು ಪಡೆದುಕೊಂಡು ಗ್ರಾಹಕರಿಂದ ಹೆಚ್ಚಿನ ಹಣ ಸುಲಿಗೆ ಮಾಡುತ್ತಿದ್ದಾರೆ. ಬಿಬಿಎಂಪಿ ವತಿಯಿಂದ ನಿರ್ವಹಣೆಯಾಗುವ ಶೌಚಾಲಯಗಳಲ್ಲಿ ಕಲಾಸಿಪಾಳ್ಯ, ಕೆ.ಆರ್.ಮಾರುಕಟ್ಟೆ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಮುಚ್ಚಿ ಹೋಗಿವೆ. ಇಲ್ಲಿ ಕಿಷ್ಕಿಂದೆಯ ರೀತಿ ಇರುವ ಶೌಚಾಲಯಗಳಲ್ಲಿ ಹೆಚ್ಚು ಶುಲ್ಕ ವಿಧಿಸಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕುವತ್ತ ಬಿಬಿಎಂಪಿ ಮುಂದಾಗಿಲ್ಲ.

ಶೌಚಾಲಯಗಳಿಗಾಗಿಯೇ ಬಿಬಿಎಂಪಿಯಲ್ಲಿ 50 ಕೋಟಿ ಮೀಸಲಿಟ್ಟಿದೆ. ಆದರೆ, ಈ ಹಣ ಬಳಕೆಯೇ ಆಗಿಲ್ಲ. 2019ರ ಬಜೆಟ್ ಮಂಡನೆ ವೇಳೆಯಲ್ಲಿ ನಗರದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕಾಗಿ ಈ ಮೊತ್ತವನ್ನು ಮೀಸಲಿಡಲಾಗಿತ್ತು. ಆದರೆ, ಇದುವರೆಗೆ ಬಳಕೆಯಾಗಿಲ್ಲ.

> “2021ರಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಸುಮಾರು 25 ಶೌಚಾಲಯಗಳು ಪ್ರಾರಂಭವಾಗಲಿವೆ. ಖಾಸಗಿ ಸಂಸ್ಥೆಯು ಇದರ ನಿರ್ವಹಣೆ ಮಾಡಲಿದ್ದು ಸಾರ್ವಜನಿಕರಿಗೆ ಉಚಿತವಾಗಿರುತ್ತದೆ. ಇದರ ಅಂತಿಮ ರೂಪುರೇಷೆಯನ್ನು ಶೀಘ್ರವೇ ನಿರ್ಧರಿಸಲಾಗುವುದು.
>
> ■ ಡಿ. ರಂದೀಪ್
>
> | ಬಿಬಿಎಂಪಿ ವಿಶೇಷ ಆಯುಕ್ತ.

ಸಂಯುಕ್ತ ಕರ್ನಾಟಕ

# ಎರಡು ನಿರಾಶ್ರಿತರ ಕೇಂದ್ರ ನಿರ್ಮಾಣ

**ಸಂ.ಕ. ಸಮಾಚಾರ ಬೆಂಗಳೂರು**
ನಗರದಲ್ಲಿರುವ ನಿರಾಶ್ರಿತರಿಗಾಗಿ ತ್ವರಿತವಾಗಿ ಎರಡು ನಿರಾಶ್ರಿತ ಕೇಂದ್ರ ಆರಂಭಿಸಲು ಬಿಬಿಎಂಪಿ ಮುಂದಾಗಿದೆ.

ಚಳಿಗಾಲ ಆರಂಭವಾಗಿರುವುದರಿಂದ ನಿರಾಶ್ರಿತರು ಚಳಿಯಲ್ಲೇ ನಡುಗುತ್ತಾ ಪಾದಚಾರಿ ಮಾರ್ಗ ಅಥವಾ ಇನ್ನಿತರ ಸ್ಥಳಗಳಲ್ಲಿ ಮಲಗುವಂತಾಗಿದೆ. ಇದನ್ನು ಗಮನಿಸಿರುವ ಬಿಬಿಎಂಪಿ ತ್ವರಿತವಾಗಿ ಇನ್ನೆರಡು ನಿರಾಶ್ರಿತರ ಕೇಂದ್ರಗಳನ್ನು ಆರಂಭಿಸಲು ಉದ್ದೇಶಿಸಿದೆ.

- **ಮೆಜೆಸ್ಟಿಕ್ ಸಮೀಪದ ಪಾಲಿಕೆ ಆರೋಗ್ಯಾಧಿಕಾರಿ ಕಚೇರಿ ಮೇಲ್ಭಾಗ**
- **ಟೌನ್‌ಹಾಲ್ ಬಳಿ ಕುಂಬಾರ ಗುಂಡಿಯಲ್ಲಿ 2 ಕೇಂದ್ರಗಳ ಆರಂಭ**



ನಗರದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ನಿರ್ಗತಿಕರಿದ್ದು, ಅವರಿಗೆ ಸೂಕ್ತ ಸೂರು ಕಲ್ಪಿಸುವ ಉದ್ದೇಶದಿಂದ ಜನವರಿ 15ರೊಳಗೆ ಮಜೆಸ್ಟಿಕ್ ಸಮೀಪದಲ್ಲಿರುವ ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಕಚೇರಿಯ ಮೇಲ್ಭಾಗದಲ್ಲಿ 90 ಮಂದಿ ನಿರಾಶ್ರಿತರಿಗೆ ರಾತ್ರಿ ವಾಸಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಹಾಗೆಯೇ ಮಾರ್ಚ್ ಒಳಗೆ ಟೌನ್‌ಹಾಲ್ ಬಳಿಯ ಕುಂಬಾರ ಗುಂಡಿಯಲ್ಲಿ 150 ಮಂದಿ ಸಾಮರ್ಥ್ಯದ ನಿರಾಶ್ರಿತ ಕೇಂದ್ರ ಆರಂಭಿಸುವುದಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಎರಡು ಕೇಂದ್ರದಲ್ಲಿ ಈಗಾಗಲೇ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ನೀರು ಹಾಗೂ ಸ್ಯಾನಿಟರಿ ಸಂಪರ್ಕ ಬಾಕಿ ಇದೆ. ಜಲಮಂಡಳಿ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ತ್ವರಿತವಾಗಿ ಸಂಪರ್ಕ ವ್ಯವಸ್ಥೆ ಮಾಡಲಾಗುವುದು ಬಿಬಿಎಂಪಿ ಕಲ್ಯಾಣ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಈಗಾಗಲೇ 777 ಮಂದಿ ಸಾಮರ್ಥ್ಯದ 10 ನಿರಾಶ್ರಿತ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿದಿನ ಸುಮಾರು 190 ರಿಂದ 200 ನಿರ್ಗತಿಕರು ರಾತ್ರಿ ವೇಳೆ ಈ ನಿರಾಶ್ರಿತ ಕೇಂದ್ರಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ.

ಸಂಯುಕ್ತ ಕರ್ನಾಟಕ

# ಸೋಂಕಿನ ಸಂಖ್ಯೆ ಹೆಚ್ಚಳ

**ಬೆಂಗಳೂರು:** ರಾಜಧಾನಿಯಲ್ಲಿ ಅತಿಹೆಚ್ಚು ಸೋಂಕಿನ ಪ್ರಕರಣಗಳು ದಾಖಲಾಗಿವೆ. ಒಟ್ಟಾರೆ ರಾಜ್ಯದಲ್ಲೇ ಅತಿಹೆಚ್ಚು 542 ಸೋಂಕಿನ ಪ್ರಕರಣ ರಾಜಧಾನಿಯಲ್ಲಿ ದಾಖಲಾಗಿದ್ದರೆ, 40 ಪ್ರಕರಣಗಳೊಂದಿಗೆ ಮೈಸೂರು ಎರಡನೇ ಸ್ಥಾನದಲ್ಲಿದೆ.ಆದರೆ ರಾಮನಗರದಲ್ಲಿ ಯಾವುದೇ ಪ್ರಕರಣ ದಾಖಲಾಗಿಲ್ಲ. ಇದೇ ವೇಳೆ ಸಂಪೂರ್ಣ ರಾಜ್ಯದಲ್ಲಿ 911 ಹೊಸ ಸೋಂಕಿನ ಪ್ರಕರಣಗಳು ಕಂಡುಬಂದಿದ್ದು 11 ಮಂದಿ ಕೊರೊನಾಗೆ ಬಲಿಯಾಗಿದ್ದಾರೆ.

ಸಂಯುಕ್ತ ಕರ್ನಾಟಕ Mon, 28 Decemb
epaper.samyukt

ಹೊಸ ದಿಗಂತ

# 754 ಮಂದಿ ಸೋಂಕಿತರು ಗುಣಮುಖ





**ಬೆಂಗಳೂರು:** ನಗರದಲ್ಲಿ ಭಾನುವಾರ 542 ಜನರಿಗೆ ಕೊರೋನಾ ಸೋಂಕು ದೃಢಪಟ್ಟಿದೆ. 754 ಸೋಂಕಿತರು ಆಸ್ಪತ್ರೆಯಿಂದ ಮನೆಗೆ ತೆರಳಿದ್ದು, 8 ಜನರು ಮೃತರಾಗಿದ್ದಾರೆ. ನಗರದಲ್ಲಿ ಒಟ್ಟು 3,86,599 ಸೋಂಕಿತರು ದೃಢಪಟ್ಟಿದ್ದು, ಒಟ್ಟು 4,299 ಜನರು ಸೋಂಕಿಗೆ ಬಲಿಯಾಗಿದ್ದಾರೆ. ಇಲ್ಲಿಯವರೆಗೆ 3,73,724 ಜನರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಕೋವಿಡ್-19ಕ್ಕೆ ಮೀಸಲಾದ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು ಹಾಗೂ ಆರೈಕೆ ಕೇಂದ್ರಗಳು ಒಳಗೊಂಡಂತೆ 8,575 ಜನ ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. ಭಾನುವಾರದ ಬಿಬಿಎಂಪಿ ವರದಿಯಲ್ಲಿ 12,18,932 ಜನರನ್ನು ಪ್ರಾಥಮಿಕ ಸಂಪರ್ಕಿತರನ್ನು ಗುರುತಿಸಲಾಗಿದ್ದು, ದ್ವಿತೀಯ ಸಂಪರ್ಕಿತರನ್ನು 14,18,243 ಜನರನ್ನು ಗುರುತಿಸಲಾಗಿದೆ. ಇದರಲ್ಲಿ ಪಾಸಿಟಿವ್ ಪ್ರಮಾಣ ಶೇ.6.88 ರಷ್ಟಿದೆ. ಕೊರೋನಾಕ್ಕೆ ಮೃತರಾಗುತ್ತಿರುವ ಪ್ರಮಾಣ ಶೇ.1.11 ರಷ್ಟಿದ್ದು, ಗುಣಮುಖ ಹೊಂದುತ್ತಿರುವವರ ಪ್ರಮಾಣ ಶೇ.96.67ಕ್ಕೆ ಏರಿದೆ.